ಶ್ರೀ ಸಿದ್ದರಾಮಯ್ಯ:– ಪ್ರತಿ ತಿಂಗಳು 60 ಕೋಟಿ ರೂ.ಗಳ ಸಬ್ಸಿಡಿಯನ್ನು ಬಡವರಿಗೋಸ್ಕರ ಕೊಡತಕ್ಕಂಥ ಅಕ್ಕಿಗೆ ಕೊಡುತ್ತಿದ್ದೇವೆ. ನಾವು 60 ಕೋಟಿ ರೂ.ಆಗುತ್ತದೆ ಎಂದು ಆಗ ಲೆಕ್ಕ ಹಾಕಿರಲಿಲ್ಲ. ಅದನ್ನು ಈಗ ತಂದುಬಿಟ್ಟಿದ್ದೀರಿ ಎಂದರೆ ಹೇಗೆ?

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– ನೀವು ತಪ್ಪುಮಾಡಿದ್ದೀರಿ ಎಂದು ನಾವು ಹೇಳುತ್ತಿಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಬಡವರಿಗೆ ಅಕ್ಕಿ ಕೊಡುವುದು ಬೇಡ ಎಂದರೆ ಬೇಡ ಎಂದು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್:– ಇಲ್ಲಿ ಚರ್ಚೆ ಆಗಬೇಕೆಂದು ಹೇಳಿದ್ದೇವೆಯೇ ಹೊರಡು ನೀವು ಹೇಳಬೇಕಾಗುತ್ತದೆ.

ಶ್ರೀ ಸಿದ್ದರಾಮಯ್ಯ:– ರಸ್ತೆಗಳ ಅಭಿವೃದ್ಧಿಗೆ ನಾವು ಇಟ್ಟ ಹಣ ಸಾಲಲಿಲ್ಲ. ಬ್ರಿಡ್ಜಸ್‌ಗಳಿಗೆ ಹಣ ಸಾಲಲಿಲ್ಲ.

ಅಧ್ಯಕ್ಷರು:– ಲಂಚ್ ಆದಮೇಲೆ ತೆಗೆದುಕೊಳ್ಳೋಣವೆಂದರೆ ಮತ್ತೆ ಮತ್ತೆ ಅದನ್ನೇ ಮಾತನಾಡುತ್ತೀರಲ್ಲಾ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ನಿಮ್ಮ ವಾದವನ್ನು ಒಪ್ಪುತ್ತೇವೆ. ಆದರೆ ಇದು ಚರ್ಚೆ ಆಗಬೇಕು.

ಶ್ರೀ ಸಿದ್ದರಾಮಯ್ಯ:– 780 ಕೋಟಿ ರೂ.ಖರ್ಚು ಆಗಿಬಿಟ್ಟಿದೆ. ಇದು ದೊಡ್ಡ ಮೊತ್ತ. ಏಕೆ ಆಗಿದೆ ಎನ್ನುವುದರ ಬಗ್ಗೆ ವಿವರಣೆ ಕೊಡುತ್ತೇನೆ. ಏಕೆ ಆಗಿದೆ ಎನ್ನುವುದನ್ನು ನಾನು ಹೇಳುತ್ತೇನೆ. ಏಕೆ ಕೊಡಬೇಕಾಯಿತು ಎಂದು ಹೇಳುತ್ತೇನೆ. ಸಣ್ಣ ಕೈಗಾರಿಕೆಗಳಿಗೆ 65 ಕೋಟಿ ರೂಪಾಯಿಗಳನ್ನು ಸಬ್ಸಿಡಿ ಕೊಡಬೇಕಾಗಿತ್ತು. ಮೂರು-ನಾಲ್ಕು ವರ್ಷಗಳಿಂದ ಕೊಟ್ಟಿರಲಿಲ್ಲ. ಸಣ್ಣ ಕೈಗಾರಿಕೆಗಳು ಸತ್ತುಹೋಗುತ್ತಿದ್ದವು. ಅವರಿಗೆ ಸಬ್ಸಿಡಿ ಕೊಡಬೇಡಿ ಎಂದರೆ ಹೇಗೆ?

ಗೊಂದಲ

ಅಧ್ಯಕ್ಷರು:– ಈಗ ಇದನ್ನು ಭೋಜನ ವಿರಾಮದ ನಂತರ ತೆಗೆದುಕೊಳ್ಳೋಣ, ಆಯಿತು. ಈಗ ಮಾನ್ಯ ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಂದನಾ ನಿರ್ಣಯವನ್ನು ತೆಗೆದುಕೊಳ್ಳೋಣ. ಆಯಿತು, ಕುಳಿತುಕೊಳ್ಳಿ. ಕಾಲಹರಣ ಮಾಡುವುದೇ ಒಂದು ಸಂಪ್ರದಾಯ ಮಾಡಿ ಕೊಂಡುಬಿಟ್ಟಿದ್ದೀರಿ ನೀವು.

5.ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ:– ಹೈದರಾಬಾದ್ ಕರ್ನಾಟಕದ ಅಭಿವೃದ್ಧಿಗೆ 371ನೇ ಆರ್ಟಿಕಲ್ ತಿದ್ದುಪಡಿ ಮಾಡುವ ಬಗ್ಗೆ.

ಶ್ರೀ ವೈಜನಾಥ ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾನೊಂದು ಅಡ್ಜರ್ನ್‌ಮೆಂಟ್ ಮೋಷನ್ನು ಕೊಟ್ಟಿದ್ದೆ. ಅದನ್ನು ರೂಲ್ 69 ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಿರಿ. ಇದುವರೆಗೂ ಅದನ್ನು ತೆಗೆದುಕೊಳ್ಳುತ್ತಿಲ್ಲ.

ಅಧ್ಯಕ್ಷರು:– ಮಾನ್ಯ ವೈಜನಾಥ ಪಾಟೀಲ್ ಅವರೆ ಕೇಳಿ, ಈಗ ಅನೇಕರು ನಿಯಮ 69ರ ಅಡಿಯಲ್ಲಿ ಚರ್ಚೆಮಾಡುಬೇಕೆಂದು ಸೂಚನೆ ಕೊಟ್ಟಿದ್ದರು. ನೀವೂ ಸಹ ಕೊಟ್ಟಿದ್ದೀರಿ. ಆದರೆ ಏನಾಗಿದೆ ಎಂದರೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಈ ವಂದನಾ ನಿರ್ಣಯ, ಬಿಲ್ಸ್ ಮತ್ತು ಪ್ರಶ್ನೋತ್ತರಗಳನ್ನು ಬಿಟ್ಟು ಉಳಿದುದ್ದು ಯಾವುದನ್ನೂ ತೆಗೆದುಕೊಳ್ಳಬಾರದೆಂದು ತೀರ್ಮಾನ ಆಗಿದೆ. ಆದ್ದರಿಂದ ದಯಮಾಡಿ.

ಶ್ರೀ ವೈಜನಾಥ ಪಾಟೀಲ್:– ತಾವು ಒಪ್ಪಿದ್ದೀರಿ.

ಅಧ್ಯಕ್ಷರು:– ನಿಮಗೆ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡುವುದಕ್ಕೆ ಅವಕಾಶ ಇದೆ. ಆಗ ಪ್ರಸ್ತಾಪ ಮಾಡಿ.

ಶ್ರೀ ವೈಜನಾಥ ಪಾಟೀಲ್:– ಇಲ್ಲ, ಇಲ್ಲ, ಆಗುವುದಿಲ್ಲ. ಈಗ ಅವಕಾಶ ಮಾಡಿಕೊಡಿ.

ಅಧ್ಯಕ್ಷರು:– ದಯಮಾಡಿ, ಆಗ ಪ್ರಸ್ತಾಪ ಮಾಡಿ. ಈಗ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯದ ಮೇಲಿನ ಚರ್ಚೆ ಮಾನ್ಯ ಹೆಗಡೆಯವರೆ ಪ್ರಸ್ತಾಪ ಮಾಡಿ.

(ಮಾನ್ಯ ಸದಸ್ಯರಾದ ಶ್ರೀ ವೈಜನಾಥ್ ಪಾಟೀಲ್ ಅವರು, ಶ್ರೀ ರೇವು ನಾಯಕ್ ಬೆಳಮಗಿ, ಶ್ರೀ ರಾಜೇಂದ್ರ ವರ್ಮ, ಪಾಪರೆಡ್ಡಿ ಅವರುಗಳು ಧರಣಿ ಮಾಡಲು ಬಾವಿಗೆ ಬಂದರು)

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ:– ಆಡಳಿತ ಪಕ್ಷದವರೆ ಧರಣಿ ಮಾಡುತ್ತಿದ್ದಾರೆ.

ಅಧ್ಯಕ್ಷರು:– ಮಾನ್ಯ ಜಯಪ್ರಕಾಶ್ ಹೆಗ್ಡೆಯವರೆ, ಮಾತನಾಡಿ.

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:– ಮಾನ್ಯ ಅಧ್ಯಕ್ಷರೆ, ಆಡಳಿತ ಪಕ್ಷದ ಸದಸ್ಯರೆ ಧರಣಿ ಮಾಡಬಹುದೆ?

ಅಧ್ಯಕ್ಷರು:– ಮಾನ್ಯ ಈಶ್ವರಪ್ಪನವರೆ, ಇಂತಹ ಸಂಪ್ರದಾಯಗಳು ಇಲ್ಲಿ ಬಹಳ ಇವೆ. ದಯಮಾಡಿ, ಅವರು ಮಾತನಾಡಲಿ. ಬಹಳ ಜನ ಸದಸ್ಯರು ಮಾತನಾಡುವುದು ಇದೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೆ, ವೈಜನಾಥ್ ಪಾಟೀಲ್ ಅವರು ಪ್ರಸ್ತಾಪ ಮಾಡತಕ್ಕ ವಿಚಾರಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:– ಅದಕ್ಕೆ ಅವಕಾಶ ಇದೆ. ಆದರೆ ಅವರಿಗೆ ಅವಕಾಶ ಸಿಕ್ಕಾಗ ಮಾತನಾಡಲಿ. ನಾವೇನೂ ಬೇಡ ಎಂದು ಹೇಳುತ್ತೇವೆಯೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:– ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಸಮಸ್ಯೆ ಬಗ್ಗೆ...

ಅಧ್ಯಕ್ಷರು:– ಮಾನ್ಯ ವಾಟಾಳ್ ನಾಗರಾಜ್ ಅವರೆ, ಏಕೆ ಸುಮ್ಮನೆ ಈ ರೀತಿ ಮಾತನಾಡುತ್ತಿದ್ದೀರಿ? ದಯಮಾಡಿ, Please.

ಶ್ರೀ ವಾಟಾಳ್ ನಾಗರಾಜ್:– ಅವರು ಏಕೆ ಬಂದಿದ್ದಾರೆ ಎಂದು ಹೇಳುತ್ತೇನೆ.

ಅಧ್ಯಕ್ಷರು:– ಆಯಿತು, ಅವರು ಬಂದಿದ್ದಾರೆ. ತಾವು ದಯಮಾಡಿ ಕುಳಿತುಕೊಳ್ಳಿ

ಶ್ರೀ ವಾಟಾಳ್ ನಾಗರಾಜ್:– ನಾನೂ ಸಹ ಅವರಿಗೆ ಬೆಂಬಲ ಕೊಡುತ್ತಿದ್ದೇನೆ. ಒಳ್ಳೆಯ ಕಥೆ ಆಯಿತು. ನಾನೂ ಅವರಿಗೆ ಬೆಂಬಲವನ್ನು ಕೊಡುತ್ತಿದ್ದೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರು ತಮ್ಮ ಸ್ಥಾನ ಬಿಟ್ಟು ಅಧ್ಯಕ್ಷ ಪೀಠದ ಬಳಿಬಂದರು)

ಅಧ್ಯಕ್ಷರು:– ಇದೊಂದು ಸಂಪ್ರದಾಯ ಮಾಡಿಕೊಂಡರೆ ನಾನೇನೂ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಸ್ಪಷ್ಟವಾಗಿ ಹೇಳಿದ್ದೇನೆ . . . . .

(ಗೊಂದಲ)

ಅಧ್ಯಕ್ಷರು:– ನೀವು ಬೆಂಬಲ ಕೊಡಿ. ನೀವು ಬೆಂಬಲ ಕೊಟ್ಟರೆ ನಾನು ಬೇಡ ಎಂದು ಹೇಳುತ್ತೇನೆಯೆ? ಅದು ನಿಮಗೆ ಬಿಟ್ಟಿದ್ದು. ಕಾಲಹರಣ ಜಾಸ್ತಿ ಆಗುವುದು ಬೇಡ. ನಿಯಮ 69ರ ಅಡಿಯಲ್ಲಿ ಅವರ ವಿಚಾರ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ನೀವೇ ತೀರ್ಮಾನ ಮಾಡಿದ್ದೀರಿ. ಆ ಕಾರಣದಿಂದ ವಂದನಾ ನಿರ್ಣಯದ ಮೇಲೆ ಏನು ಬೇಕಾದರೂ ಮಾತನಾಡುವುದಕ್ಕೆ ಅವಕಾಶ ಇದೆ, ಮಾತನಾಡಿ. ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳುತ್ತಾರೆ. ದಯಮಾಡಿ ಕೇಳಿ. ನೀವು ಅದರ ಬಗ್ಗೆ ಹಿಂದೆ ಅನೇಕ ಸಾರಿ ಮಾತನಾಡಿದ್ದೀರಿ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ. ಅದಕ್ಕಾಗಿ ನಿಮ್ಮ ಬೇಡಿಕೆಗೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುಬೇಕೆಂದು ನಾನು ವಿನಂತಿ ಮಾಡುತ್ತೇನೆ. ಅದನ್ನು ನಾನು ಹೇಳಿದರೂ ನೀವು ಈ ರೀತಿ ಮಾಡಿದರೆ ಹೇಗೆ?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆ ಮುಗಿದ ತಕ್ಷಣ ಅವಕಾಶ ಕೊಡಿ.

ಅಧ್ಯಕ್ಷರು:– ಅದು ಹೇಗೆ ಆಗುತ್ತದೆ? ಈಗ ಏನಾಗಿದೆ ಎಂದರೆ ಬೇರೆ ಬೇರೆ ಅನೇಕ ಜನ ಮಾನ್ಯ ಸದಸ್ಯರು ನಿಯಮ 69ರ ಅಡಿಯಲ್ಲಿ ಕೇಳಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ:– ಪರಿಸ್ಥಿತಿ ಏನು ಎಂದು ನಾನು ನಿನ್ನೆಯೇ ಹೇಳಿದೆ. ಸದನವನ್ನು ಸ್ವಲ್ಪ ಜಾಸ್ತಿ ದಿವಸ ನಡೆಸಿ ಎಂದು ಹೇಳಿದೆ. ಅದನ್ನು ಕೇಳಲಿಲ್ಲ. ಈಗ ಎಲ್ಲಿ ಮಾತನಾಡುವುದಕ್ಕೆ ಆಗುತ್ತದೆ?

(ಗೊಂದಲ)

ಅಧ್ಯಕ್ಷರು:– ಎಲ್ಲಾ ಅಡ್ಜಟ್ರ್ಸ್ ಆದ ಮೇಲೆ ಮಾತನಾಡಬಹುದು. .

ಶ್ರೀ ಸಿದ್ದರಾಮಯ್ಯ:– ದಯಮಾಡಿ ಮಾನ್ಯ ಸದಸ್ಯರುಗಳೆಲ್ಲಾ ಬಂದು ತಮ್ಮ ತಮ್ಮ ಆಸನಗಳಲ್ಲಿ ಕುಳಿತುಕೊಳ್ಳಿ.

ಶ್ರೀ ಕೆ.ಎಸ್.ಈಶ್ವರಪ್ಪ:– ಹೈದರಾಬಾದ್–ಕರ್ನಾಟಕದ್ದು ಬಹಳ ಮಹತ್ವ ಪೂರ್ಣ ವಿಚಾರ ಇದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಇದ್ದೀರಿ, ಅವರಿಗೆ ನಾವು ಇದ್ದೇವೆ ಎಂದು ಸ್ವಲ್ಪ ಧೈರ್ಯ ಹೇಳಿ.

ಶ್ರೀ ಸಿದ್ದರಾಮಯ್ಯ:– ನಾವು ಯಾವಾಗಲೂ ನಿಮ್ಮ ಪರವಾಗಿ ಇದ್ದೇವೆ. ಆಯಿತಲ್ಲಾ. ಮಾನ್ಯ ವೈಜನಾಥ್ ಪಾಟೀಲ್ ಅವರು, ಮಾನ್ಯ ರೇವು ನಾಯಕ್ ಬೆಳಮಗಿ ಅವರು ಮತ್ತು ವಾಟಾಳ್ ನಾಗರಾಜ್ ಅವರು ಕೇಳಬೇಕು. ನಾವು ಆರ್ಟಿಕಲ್ 371ರ ಬಗ್ಗೆ ಚರ್ಚೆ ಮಾಡಬಾರದು ಎಂದು ನಮ್ಮದೇನೂ ವಿರೋಧ ಇಲ್ಲ. ಸರ್ಕಾರ ಚರ್ಚೆ ಮಾಡಲಿಕ್ಕೆ ಸದಾ ಸಿದ್ಧ ಇದೆ. ಯಾವುದೇ ರಾಜ್ಯಕ್ಕೆ ಸಂಬಂಧಪಟ್ಟಂಥ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಕ್ಕೆ ಸರ್ಕಾರ ಮುಕ್ತ ಮನಸ್ಸಿನಿಂದ

ಇದೆ. our Government is totally transparent. ಅದರ ಬಗ್ಗೆ ಅನುಮಾನ ಬೇಡ. ಈಗ ಆರ್ಟಿಕಲ್ 371ರ ಬಗ್ಗೆ ಏಕೆ ಚರ್ಚೆ ಬೇಡ ಎಂದು ಅಧ್ಯಕ್ಷರು ಹೇಳುತ್ತಾರೆ ಎಂದರೆ ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ಇವತ್ತು ಈ ಸದನ ಕರೆದಿರತಕ್ಕದ್ದು ಬಹಳ ಮುಖ್ಯವಾಗಿ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಿ ವಂದನಾ ನಿರ್ಣಯ ಪಾಸ್ ಮಾಡಬೇಕು ಎನ್ನುವ ಕಾರಣಕ್ಕಾಗಿ ಕರೆದಿದ್ದೇವೆ. ಕಳೆದ ಕೆಲವು ದಿವಸಗಳಿಂದ ಈ ಸದನ ಪ್ರಾರಂಭವಾದ ಮೇಲೆ ಕೆಲವು ದಿನಗಳೂ ಬೇರೆ ಬೇರೆ ವಿಚಾರಗಳು, ರಾಜ್ಯಕ್ಕೆ ಸಂಬಂಧಪಟ್ಟಂತಹ ಸಮಸ್ಯೆ ಬಗ್ಗೆ, ಜನರ ಸಮಸ್ಯೆಗಳ ಬಗ್ಗೆ ಚರ್ಚೆಗಳು ಆಗಿವೆ. ಕುಡಿಯುವ ನೀರು, ಮತ್ತಿತರ ಸಮಸ್ಯೆಗಳ ಬಗ್ಗೆ ಚರ್ಚೆಗಳು ಆಗಿವೆ. ಆದ್ದರಿಂದ ಇದನ್ನು ಶನಿವಾರದ ಒಳಗೆ ಮಾಡಿ ಮುಗಿಸಿ ಬಿಡಬೇಕು ಎಂದು ಹೇಳಿ ತೀರ್ಮಾನ ಆಗಿದೆ. ಮಾನ್ಯ ವಾಟಾಳ್ ನಾಗರಾಜ್ ಅವರೂ ಕೂಡ ಇದ್ದರು. ಇವರು ಯಾರೂ ಇರಲಿಲ್ಲ. ಬಿಜೆಪಿ ಮುಖಂಡರು ಇದ್ದರು. ಮಾಧುಸ್ವಾಮಿಯವರು ಇದ್ದರು. ಫ್ಲೋರ್ ಲೀಡರ್ಸ್ ಎಲ್ಲಾ ಇದ್ದರು. ತೀರ್ಮಾನ ಆಗಿದೆ. ಆರ್ಟಿಕಲ್ 371ರ ಬಗ್ಗೆ ಸರ್ಕಾರ ಏನು ಮಾಡಿದೆ ಎನ್ನತಕ್ಕದ್ದೂ ಕೂಡ ಮಾನ್ಯ ಸದಸ್ಯರ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಈಗಾಗಲೇ ನಾವು ಮತ್ತು ಮಾನ್ಯ ಮುಖ್ಯಮಂತ್ರಿಗಳು ಸರ್ವ ಪಕ್ಷಗಳ ನಿಯೋಗ ಕರೆದುಕೊಂಡು ಹೋಗಿ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ, ಅಲ್ಲಿರತಕ್ಕ ಗೃಹ ಮಂತ್ರಿಗಳನ್ನು ಭೇಟಿ ಮಾಡಿ ಕಾನ್‌ಸ್ಟಿಟ್ಯೂಷನ್‌ಗೆ ತಿದ್ದುಪಡಿ ಮಾಡಬೇಕು. ಆರ್ಟಿಕಲ್ 371ಕ್ಕೆ ತಿದ್ದುಪಡಿ ತೆಗೆದುಕೊಂಡು ಬಂದು. . . .

(ಗೊಂದಲ)

ಶ್ರೀ ಸಿದ್ದರಾಮಯ್ಯ:– ರಾಜ್ಯ ಸರ್ಕಾರ ಏನು ಪ್ರಯತ್ನ ಮಾಡುತ್ತಿದೆ ಎಂದು ನಿಮ್ಮ ಗಮನಕ್ಕೆ ಬರಬೇಕಲ್ಲಾ. We are at it. ನಾವು ಅದು ಆಗಬೇಕು ಎಂತಲೇ ರಾಜ್ಯಸರ್ಕಾರಕ್ಕೆ ಇರತಕ್ಕಂಥ ಕಳಕಳಿ, ಅದನ್ನು ಮಾಡಿದ್ದೇವೆ. ಅದಾದ ಮೇಲೆ ಕೂಡ ನಾನು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಹೋದಾಗ ಮತ್ತೆ ಗೃಹ ಮಂತ್ರಿಗಳನ್ನು ಭೇಟಿ ಮಾಡಿ, ಮತ್ತೆ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದಾಗ ಮತ್ತೆ ಅವರಿಗೆ ರಿಮೈಂಡ್ ಮಾಡತಕ್ಕ ಕೆಲಸವನ್ನು ಮಾಡಿದ್ದೇವೆ.

ಶ್ರೀ ಕೆ.ಎಸ್.ಈಶ್ವರಪ್ಪ:– ಕೇಂದ್ರದ ಕಡೆ ಕೈ ತೋರಿಸಿದರೆ ಆಗುವುದಿಲ್ಲ. ದಯವಿಟ್ಟು ರಾಜ್ಯ ಸರ್ಕಾರ ಕೂಡ ಗಮನ ಕೊಡಬೇಕು. ಕೇಂದ್ರದ ಕಡೆಗೆ ಕೈ ತೋರಿಸಿ ಕುಳಿತುಕೊಂಡರೆ ಆಗುವುದಿಲ್ಲ. ನಮ್ಮ ರಾಜ್ಯ ಸರ್ಕಾರ ಕೂಡ ಹೈದರಾಬಾದ್–ಕರ್ನಾಟಕದ ಅಭಿವೃದ್ಧಿ ದೃಷ್ಟಿಯಿಂದ ಒಂದಿಷ್ಟು ಹಣ ಇಡುತ್ತೇವೆ. ಒಂದಿಷ್ಟು ಕೆಲಸ ಮಾಡಿ ತೋರಿಸುತ್ತೇವೆ ಎಂದು ಧೈರ್ಯ ಕೊಟ್ಟರೆ ಆ ಭಾಗದ ಜನರಿಗೆ ಅನುಕೂಲ ಆಗುತ್ತದೆ. ಬರೇ ಕೇಂದ್ರವನ್ನು ತೋರಿಸಿಕೊಂಡು ಕುಳಿತುಕೊಂಡರೆ ಕ್ರಮ ಏನಾಗುತ್ತದೆ?

ಶ್ರೀ ಸಿದ್ದರಾಮಯ್ಯ:– ನಾವು ಕಾನ್‌ಸ್ಟಿಟ್ಯೂಷನ್ ಅಮೆಂಡ್‌ಮೆಂಟ್ ಮಾಡುವುದಕ್ಕೆ ಆಗುತ್ತದೆಯೆ?

(ಗೊಂದಲ)

ಅಧ್ಯಕ್ಷರು:– ಸರ್ಕಾರ ಒಪ್ಪುವುದಾದರೆ ನನ್ನದೇನೂ ಅಭ್ಯಂತರ ಇಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಕಾಲ ಸಿಕ್ಕಿದರೆ ಚರ್ಚೆ ಮಾಡಬಹುದು.

ಅಧ್ಯಕ್ಷರು:– ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾ ನಿರ್ಣಯವನ್ನು ಈಗ ಪಾಸ್ ಮಾಡೋಣ. ಪಾಸ್ ಮಾಡಿದ ತಕ್ಷಣ ನಿಮಗೊಂದು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸಿದ್ದರಾಮಯ್ಯ:– ಅಧ್ಯಕ್ಷರು ಕಾಲ ನಿಗದಿ ಮಾಡಿದರೆ ನನ್ನದೇನೂ ತಕರಾರು ಇಲ್ಲ

ಅಧ್ಯಕ್ಷರು:– ಸಭೆಯಲ್ಲಿ ನನ್ನ ಒಂದು ವಿನಂತಿ ಅಂದರೆ. . . ಈಗ ಏನಪ್ಪ ಅಂದರೆ

ಶ್ರೀ ಜಗದೀಶ್ ಶೆಟ್ಟರ್:– ಚರ್ಚೆಗೆ ಅವಕಾಶ ಕೊಡಬೇಕು. ಮಾನ್ಯ ಸಿದ್ದರಾಮಯ್ಯನವರು ಹೇಳಿದರು.

ಅಧ್ಯಕ್ಷರು:– ಮಾನ್ಯ ಶೆಟ್ಟರ್ ಅವರೆ, ನನ್ನ ಮಾತುಗಳನ್ನೂ ಕೇಳಿ ಬಿಡಿ ನೀವು.

ಶ್ರೀ ಜಗದೀಶ್ ಶೆಟ್ಟರ್:– ಆಯಿತು, ಸನ್ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:– ಈಗೇನು ವಿಚಾರ ಅಂದರೆ ಬಹಳ ಜನ ಹೊಸದಾಗಿ ಆಯ್ಕೆ ಆಗಿ ಬಂದಂತಹ ಸದಸ್ಯರು ವಂದನಾ ನಿರ್ಣಯದಲ್ಲಿ ಭಾಗಿ ಆಗಬೇಕೆಂದು ಬಂದು ರೆಪ್ರೆಸೆಂಟ್ ಮಾಡಿದ್ದಾರೆ. ಅವರಿಗೂ ಅವಕಾಶ ಕೊಡಬೇಕು. ಪ್ರಮುಖವಾಗಿ ಇದರ ಬಗ್ಗೆ ಪ್ರಸ್ತಾಪ ಮಾಡಬೇಕೆಂದು ತಾವೆಲ್ಲ ಒತ್ತಾಯ ಮಾಡುತ್ತಿದ್ದೀರಿ. ಸರ್ಕಾರವು ಮುಕ್ತ ಮನಸ್ಸಿನಿಂದ ಇದೆ. ಆದ್ದರಿಂದ ನಾನು ಹೇಳುವುದು ಏನು ಅಂದರೆ ಇವತ್ತು ಅದಕ್ಕೋಸ್ಕರ ರಾತ್ರಿ 9.00 ಗಂಟೆಯವರೆಗೆ ಈ ಸಭೆಯನ್ನು ನಡೆಸಬೇಕೆಂದು ತೀರ್ಮಾನ ಮಾಡಿದ್ದೇನೆ. ಅದಕ್ಕೆ ಸಹಕಾರ ಮಾಡಿ. ನಿಮಗೂ ಒಂದು ಅರ್ಧ ಗಂಟೆಗಳ ಕಾಲ ಚರ್ಚೆಮಾಡಲು ಅವಕಾಶ ಮಾಡಿಕೊಡುತ್ತೇನೆ. ದಯಮಾಡಿ ತಾವುಗಳು ತಮ್ಮ ತಮ್ಮ ಆಸನಗಳಿಗೆ ಹೋಗಬೇಕು.

(ಗೊಂದಲ)

ಅಧ್ಯಕ್ಷರು:– ನಾನು ಅವಕಾಶ ಕೊಡುತ್ತೇನೆ. ಸಮಯ ಫಿಕ್ಸ್‌ಅಪ್ ಮಾಡಿ ಕೊಡುತ್ತೇನೆ. ನೀವು ಕೇಳಿದ್ದು ಏನು? ನೀವು ನಿಮ್ಮ ಸ್ಥಾನಕ್ಕೆ ನಡೆಯಿರಿ.

ಶ್ರೀ ಜಗದೀಶ್ ಶೆಟ್ಟರ್:– ಬಹಳಷ್ಟು ಮಹತ್ವದ ವಿಚಾರ ಇದೆ.

ಅಧ್ಯಕ್ಷರು:– ಈಗ ಬಹಳಷ್ಟು ಜನ ಸದಸ್ಯರು ಮಾತನಾಡಬೇಕೆಂದು ಇದ್ದಾರೆ. ರಾತ್ರಿ 9.00 ಗಂಟೆಯವರೆಗೂ ಮಾತನಾಡಲಿ. ಎಲ್ಲರಿಗೂ ಅವರವರ ಕಾನ್‌ಸ್ಟಿಟ್ಯೂಯೆನ್ಸಿಯ ಪ್ರಾಬ್ಲಮ್ ಇರುತ್ತದೆ, ಮಾತನಾಡಲಿ.

ಶ್ರೀ ಜಗದೀಶ್ ಶೆಟ್ಟರ್:– ಬೇರೆ ಬೇರೆ ರೀತಿಯ ವಿಚಾರಗಳೂ ಬರುತ್ತಿವೆ. ಕೇಂದ್ರ ಸರ್ಕಾರ ಇದರ ಬಗ್ಗೆ . . .

ಅಧ್ಯಕ್ಷರು:– ಅದು ಆಯಿತು.

ಶ್ರೀ ಜಗದೀಶ್ ಶೆಟ್ಟರ್:– ಕೇಂದ್ರ ಸರ್ಕಾರ ಮತ್ತು ಬೇರೆ ಬೇರೆ ರೀತಿಯಾದ ವಿಚಾರಗಳು ಬರುತ್ತಿವೆ. ಸಂವಿಧಾನ ತಿದ್ದುಪಡಿ ಮಾಡಲು . . . . .

ಅಧ್ಯಕ್ಷರು:– ಆಯಿತು, ನಾನು ವಂದನಾ ನಿರ್ಣಯದ ಮೇಲೆ ಮಾತನಾಡಲು ಮಾನ್ಯ ಜಯಪ್ರಕಾಶ್ ಹೆಗ್ಡೆಯವರನ್ನು ಕರೆದಿದ್ದೇನೆ. ಮಾನ್ಯ ಹೆಗ್ಡೆಯವರೇ ವಂದನಾ ನಿರ್ಣಯದ ಮೇಲೆ ಮಾತನಾಡಿ. ಬಾವಿಯಲ್ಲಿರುವ ಮಾನ್ಯ ಸದಸ್ಯರುಗಳೆಲ್ಲರು ದಯಮಾಡಿ ತಮ್ಮ ತಮ್ಮ ಆಸನಗಳಿಗೆ ತೇರಳಬೇಕು.

(ಮಾನ್ಯ ಸದಸ್ಯರುಗಳಾದ ಶ್ರೀ ವೈಜನಾಥ್ ಪಾಟೀಲ್, ಶ್ರೀ ವಾಟಾಳ್ ನಾಗರಾಜ್, ಶ್ರೀ ರೇವು ನಾಯಕ್ ಬೆಳಮಗಿ, ಶ್ರೀ ರಾಜೇಂದ್ರ ವರ್ಮ, ಶ್ರೀ ಪಾಪ ರೆಡ್ಡಿ ಇವರುಗಳು ತಮ್ಮತಮ್ಮ ಸ್ಥಾನಗಳಲ್ಲಿ ಆಸೀನರಾದರು.)